ಆರ್.ಎ. ಸಂಖ್ಯೆಃ **38 /2024** ಪಿ.ಡಬ್ಲ್ಯೂಃ**1**
ಸಾಕ್ಷಿಯನ್ನು ದಿಃ **19.08.2024** ರಂದು ಕರೆಸಿ ಪ್ರಮಾಣೀಕರಿಸಾಯಿತು.
**<u>ಪಾಟೀ ಸವಾಲು ಎದುರುದಾರರ ಪರ ವಕೀಲರಿಂದಃ-</u>**

ನನಗೆ ಮೂರು ಜನ ಮಕ್ಕಳು. ನನ್ನ ಮೂರು ಜನ ಮಕ್ಕಳಲ್ಲಿ ಇಬ್ಬರು ವ್ಯವಸಾಯ ಮಾಡುತ್ತಿದ್ದು ನನ್ನ ಇನ್ನೊಬ್ಬ ಮಗ ಬೆಂಗಳೂರಿಗೆ ವಕೀಲಿ ವೃತ್ತಿ ಮಾಡಲು ಹೋಗಿ ಬಂದಿರುತ್ತಾರೆ. ನನ್ನ ಮಕ್ಕಳು ಆರಾಮವಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ಸಕ್ಕರೆ ಖಾಯಿಲೆ ಇದೆ. ನನ್ನ ಹೆಂಡತಿಗೆ ಸಕ್ಕರೆ ಖಾಯಿಲೆ ಬಂದು 3 ವರ್ಷವಾಗಿದ್ದು ಈಗ 1 ವರ್ಷದಿಂದ ಅವರ ಕಾಲಿಗೆ ಗ್ಯಾಂಗ್ರಿನ್ ಅಗಿರುತ್ತದೆ. ಎಫ್ ಡಿ ಪಿ ನಂಬರ್ 2/16 ರಲ್ಲಿ ನನ್ನ ಮಕ್ಕಳು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರು ಎಂದರೆ ಸರಿಯಲ್ಲ. ಎಫ್ ಡಿ ಪಿ ನಂಬರ್ 2/16 ಕೇಸಿನಲ್ಲಿ ನನ್ನ ಮಕ್ಕಳು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದು ಆ ಎಲ್ಲಾ ವಿಚಾರ ನನ್ನ ಮಕ್ಕಳಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಎಫ್ ಡಿ ಪಿ ನಂಬರ್ 2/16 ರಲ್ಲಿ ಎನು ಆದೇಶವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಮಕ್ಕಳೊಂದಿಗೆ ಮಾತನಾಡುತ್ತೇನೆ. ನನ್ನ ಹೆಂಡತಿಯನ್ನು ಯಾವ ತಿಂಗಳಲ್ಲಿ ಆಸ್ಪತ್ರೆಯಲ್ಲಿ ದಾಖಲು ಮಾಡಿರುತ್ತೇನೆಂದು ನನಗೆ ಗೊತ್ತಿಲ್ಲ. ನಾನು 3-4 ತಿಂಗಳಿಂದ ನನ್ನ ಹೆಂಡತಿಯನ್ನು ಆಸ್ಪತ್ರೆಯಲ್ಲಿ ದಾಖಲಿಸಿದ್ದೇನು. ವಿಚಾರಣೆ ನ್ಯಾಯಾಲಯದಲ್ಲಿ ಶಾಂತಮ್ಮ ವಕೀಲರು ಪ್ರತಿನಿಧಿಸುತ್ತಿದ್ದರು ನಂತರ ಆ ವಕೀಲರನ್ನು ನಾನು ಬಿಟ್ಟಿರುತ್ತೇನೆ. ಮಾನ್ಯ ವಿಚಾರಣೆ ನ್ಯಾಯಾಲಯದಲ್ಲಿ ಕೇಸು ಯಾವಾಗ ವಿಲೇವಾರಿ ಆಯಿತು ಎಂದು ನನಗೆ ಗೊತ್ತಿಲ್ಲ. ನನಗೆ ವಿಚಾರಣೆ ನ್ಯಾಯಾಲಯದಲ್ಲಿ ಆದ ತೀರ್ಪಿನ ಪ್ರತಿಯನ್ನು ಬೆಂಗಳೂರಿನ ವಕೀಲರು ತೆಗೆದುಕೊಟ್ಟರು ನನಗೆ ಅವರ ಹೆಸರು ಗೊತ್ತಿಲ್ಲ. ನಾನು ಮತ್ತು ನನ್ನ ಮಕ್ಕಳು ಒಂದೇ ಕುಟುಂಬದಲ್ಲಿ ವಾಸವಿದ್ದು ನನಗೆ ನನ್ನ ಮಕ್ಕಳ ವ್ಯವಹಾರಗಳು ಗೊತ್ತಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿ 3 ತಿಂಗಳ ನಂತರ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದು ಯಾವ ದಿನಾಂಕದಂದು ಬಿಡುಗಡೆ ಆದರು ಎಂದು ಗೊತ್ತಿಲ್ಲ. ನನ್ನ ಹೆಂಡತಿ ಬೆಂಗಳೂರಿನ ರೀಗಲ್ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಮಾನ್ಯ ವಿಚಾರಣೆ ನ್ಯಾಯಾಲಯದಲ್ಲಿ ಎನು ಆದೇಶವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಸುಳ್ಳು ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿ ಎದುರುದಾರರಿಗೆ ತೊಂದರೆ ಕೊಡಲು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ.1 ರಿಂದ 31 ದಾಖಲೆಗಳನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ.
**<u>ಪಾಟೀ ಸವಾಲು ಶ್ರೀ ಎಸ್ ಆರ್ ಜೆ ವಕೀಲರಿಂದ ಕೋರಿಕೆಯ ಮೇರೆಗೆ ಮುಂದೂಡಲಾಯಿತು.</u>**
**<u>ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.</u>**

ಓ ಹೇ ಕೇ ಸರಿ ಇದೆ,

Sd/-

**(ಗಣಪತಿ ಗುರುಸಿದ್ಧ ಬಾದಾಮಿ)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ ಕೆ.ಜಿ.ಎಫ್(ಪೀಠ)